MYSORE LEGISLATIVE ASSEMBLY

TWENTY-SECOND DAY.

Friday, 20th March 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.), in the Chair.

STARRED QUESTIONS

(to which oral answers were given)

Subsidy and Loan granted by the Central Government towards Sericulture Wells in Kunigal Taluk.

*Q.—79. Sri ANDANAIAH (Kunigal).—

Will the Government be pleased to state:—

(*a*) the amount of subsidy and loan granted by the Central Government for the year 1961-62 towards Sericulture wells in Kunigal Taluk;

(*b*) out of this amount granted, the amount spent for the purpose?

A.—Sri R. DAYANANDA SAGAR (Deputy Minister for Sericulture)

(*a*) Rs. 64,380.

(*b*) No expenditure was incurred for the purpose during the year.

ಶ್ರೀ ಅಂದಾನಯ್ಯ.—1961-62ನೇ ಸಾಲಿನಲ್ಲಿ ಯಾವ ಹಣವನ್ನೂ ಖರ್ಚುಮಾಡದೇ ಇರುವುದಕ್ಕೆ ಕಾರಣವಾದರೂ ಏನು ಸ್ವಾಮಿ?

ಶ್ರೀ ಆರ್. ದಯಾನಂದಸಾಗರ್.—ನಾವು ಗ್ರಾಂಟನ್ನು ತಾಲ್ಲೂಕು ಬೋರ್ಡ್‌ಗಳ ಮೂಲಕ ಹಂಚಬೇಕೆಂದು ವ್ಯವಸ್ಥೆ ಮಾಡಿದ್ದೆವು. ತಾಲ್ಲೂಕು ಬೋರ್ಡಿನವರು ಖರ್ಚು ಮಾಡಲಿಲ್ಲ. ನಾವು ಬಹಳ ದಿನದಿಂದ ಅಪ್ಲಿಕೇಷನ್ ಹಾಕಬೇಕು ಎಂದು ಕೇಳಿದರೂ ಯಾರೂ ಅಪ್ಲಿಕೇಷನ್ ಹಾಕಲಿಲ್ಲ. ಆ ಕಾರಣದಿಂದ ಯಾರಿಗೂ ಕೊಡುವುದಕ್ಕಾಗಲಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕಳೆದ ವರ್ಷ ತಾಲ್ಲೂಕು ಬೋರ್ಡ್‌ಗಳಿಗೆ ಹಣ ಖರ್ಚುಮಾಡುವ ಜವಾಬ್ದಾರಿಯನ್ನು ವಹಿಸಿದ್ದೆವು, ಆ ಹಣ ಖರ್ಚಾಗದೆ ಉಳಿಯಿತು ಎಂದು ಹೇಳಿದಿರಿ. ಅದಕ್ಕೆ ಮುಂಚೆ ಈ ಬಗ್ಗೆ ಯಾವ ವಿಧಾನವನ್ನು ಅನುಸರಿಸುತ್ತಿದ್ದಿರಿ?

ಶ್ರೀ ಆರ್. ದಯಾನಂದಸಾಗರ್.—ತಾಲ್ಲೂಕ್ ಬೋರ್ಡಿಗೆ ಕೊಡುವುದಕ್ಕೆ ಮುಂಚೆ ಇರಾಜೆಯವರೇ ಖರ್ಚು ಮಾಡುತ್ತಿದ್ದರು. ಆದರೆ ಹೊಸದಾಗಿ ತಾಲ್ಲೂಕು ಬೋರ್ಡಿಗೆ ವಹಿಸಿದೆವು. ಅವರಿಗೆ ಏನು ಕಷ್ಟವೋ ಖರ್ಚು ಮಾಡುವುದಕ್ಕೆ ಆಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ರೇಷ್ಮೆ ಬೆಳೆಯತಕ್ಕ ಹೆಬ್ಬೂರು ಕ್ಷೇತ್ರ ಕುಣಿಗಲ್‌ಗೆ ಸೇರಿದೆ. ಕೇಂದ್ರ ಸರ್ಕಾರದಿಂದ ತುಮಕೂರಿಗೆ ಎಷ್ಟು ಹಣ ಕೊಟ್ಟಿದ್ದೀರಿ?

ಶ್ರೀ ಆರ್. ದಯಾನಂದಸಾಗರ್.—ಒಟ್ಟು 75 ಸಾವಿರ ತುಮಕೂರಿಗೋಸ್ಕರ ಕೊಟ್ಟಿದ್ದೇವೆ. ಅದರಲ್ಲಿ 64,380 ರೂಪಾಯಿಗಳನ್ನು ಕುಣಿಗಲ್‌ಗೆ ಕೊಟ್ಟಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—1961-62ನೇ ಇಸವಿಯಲ್ಲಿ ತಾಲ್ಲೂಕು ಬೋರ್ಡಿಗೆ ಹಣವನ್ನು ಕೊಟ್ಟದ್ದು ವರ್ಷದ ಕೊನೆಯಲ್ಲಿ ಅಲ್ಲವೇ ?

ಶ್ರೀ ಆರ್. ದಯಾನಂದಸಾಗರ್.—ವರ್ಷದ ಮಧ್ಯದಲ್ಲಿ ಕೊಟ್ಟಿದ್ದೇವೆ. ಅವರಿಗೆ ಹಣ ಕೊಡುತ್ತೇವೆಂದು ಗೊತ್ತಿತ್ತು. ಅವರು ಅಪ್ಲಿಕೇಷನ್ ತರಿಸಿಕೊಂಡು process ಮಾಡಿ ಇಟ್ಟುಕೊಂಡಿದ್ದರೆ ಹಣ ಕೊಡುವುದಕ್ಕೆ ಅಡ್ಡಿ ಇರುತ್ತಿರಲಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ತಾಲ್ಲೂಕ್ ಬೋರ್ಡಿನವರು ಹಣವನ್ನು lapse ಮಾಡಿರುವುದರಿಂದ ಇಲಾಖೆಯ ಮೂಲಕ ಹೆಂಚುವ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ದಯಾನಂದಸಾಗರ್.—ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಯಾವ ಉದ್ದೇಶಕ್ಕಾಗಿ ಇಂಡಿಯಾ ಸರ್ಕಾರದವರು ಹಣವನ್ನು ಕೊಟ್ಟರೋ ಆ ಉದ್ದೇಶಕ್ಕೋಸ್ಕರ ಖರ್ಚಾಗಲಿಲ್ಲವೆಂದು ಹೇಳಿದರು. ಬೇರೆ ಯಾವುದಾದರೂ ಉದ್ದೇಶಕ್ಕೆ ಖರ್ಚಾಗಿದೆಯೇ ಅಥವಾ ಮುಂದಿನ ವರ್ಷಕ್ಕಾದರೂ ಆ ಗ್ರಾಂಟ್ ಇರುತ್ತದೆಯೇ ?

ಶ್ರೀ ಆರ್. ದಯಾನಂದಸಾಗರ್.—ಇಂಡಿಯಾ ಸರ್ಕಾರದಿಂದ ಐದು ವರ್ಷಗಳಿಗೋಸ್ಕರ 12½ಲಕ್ಷ ರೂಪಾಯಿಗಳನ್ನು ಬಾವಿಗಳಿಗೋಸ್ಕರ ಖರ್ಚು ಮಾಡಬೇಕೆಂದು ಸಿದ್ಧಾಂತವಾಗಿದೆ. ಅದರಲ್ಲಿ ಒಂದು ವರ್ಷ ಖರ್ಚಾಗಲಿಲ್ಲವೆಂದರೆ ಮುಂದಿನ ವರ್ಷ ಖರ್ಚುಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Sri G. V. GOWDA.—Is it not a fact that there is much delay in scrutinising and returning applications in the Sericulture Department submitted by the Taluk Boards ?

Sri R. DAYANANDA SAGAR.—It is not so, Sir.

ಶ್ರೀ ಜಿ. ರಾಮೇಗೌಡ.—ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಂದ ಸರ್ಕಾರದವರು ಹಾಕಿರುವ ತಕ್ಕ ಕಂಡೀಷನ್‌ಗಳನ್ನೂ ಸಡಿಲಗೊಳಿಸಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿಲ್ಲವೇ, ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ಆ ವಿಚಾರ ನನ್ನ ಹತ್ತಿರವಿಲ್ಲ. ಬಹುಶಃ ಸಂಬಂಧಪಟ್ಟ ಮಂತ್ರಿಗಳು ನೋಡುತ್ತಿದ್ದಾರೆಂದು ಕಾಣುತ್ತದೆ.

Sri R. N. LAKSHMIPATHI.—Would not the amounts lapse if they are not spent before March ?

Sri R. DAYANANDA SAGAR.—These are schemes under the Five-Year plan and if it could not be spent in one year, it would be used in the next.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರೇಷ್ಮೆ ವ್ಯವಸಾಯವನ್ನು ಎಲ್ಲೆಲ್ಲ ಮಾಡಬಹುದೆಂದು ಸರ್ಕಾರ ಏನಾದರೂ ಸರ್ವೆ ಮಾಡಿದೆಯೇ ?

ಶ್ರೀ ಆರ್. ದಯಾನಂದಸಾಗರ್.—ಎಲ್ಲ ಕಡೆಯೂ ರೇಷ್ಮೆಬೆಳೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಹವಾಗುಣ, ಎತ್ತರ ಎಲ್ಲ ಬೇಕಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಈಗಾಗಲೇ ಮಾಡುತ್ತಿದ್ದೇವೆ. ಇನ್ನೂ ಎಲ್ಲಿಯಾದರೂ ಮಾಡುವುದಕ್ಕೆ ಸಾಧ್ಯವೇ ಎಂದು ತಜ್ಞರು ಯೋಚನೆ ಮಾಡುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ತಾಲ್ಲೂಕು ಬೋರ್ಡಿಗೆ ಕೊಟ್ಟಂಥ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡದೇ ಇರುವುದರಿಂದ ಆ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ, ಸ್ವಾಮಿ ?

ಶ್ರೀ ಆರ್. ದಯಾನಂದಸಾಗರ್.—ತಾಲ್ಲೂಕು ಬೋರ್ಡ್ ಅಧಿಕಾರಿಗಳ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದೋ ಅದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆ ಖರ್ಚು ಮಾಡಿಲ್ಲವೆಂದು ವಿಚಾರಣೆ ಮಾಡುತ್ತೇವೆ.

ಶ್ರೀ ವಿ. ಎಂ. ದೇವ್.—ಹಣವನ್ನು ತಾಲ್ಲೂಕ್ ಬೋರ್ಡಿಗೆ ಕೊಟ್ಟ ಸರಿಯಾದ ತಾರೀಖು ಯಾವುದು ?

ಶ್ರೀ ಆರ್. ದಯಾನಂದಸಾಗರ್.—ಆ ಸಮಾಚಾರ ನನ್ನ ಹತ್ತಿರ ಈಗ ಇಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾಲ್ಲೂಕ್ ಬೋರ್ಡಿನವರು ಖರ್ಚು ಮಾಡದೇ ಇರುವುದರಿಂದ ಅವರಮೇರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ತಾಲ್ಲೂಕು ಬೋರ್ಡುಗಳಿಗೆ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಗ್ರಾಂಟ್ ಯಾವಾಗ ಸ್ವಾಮಿ ಕೊಟ್ಟದ್ದು?

ಶ್ರೀ ಆರ್. ದಯಾನಂದಸಾಗರ್.—ಜಿಲ್ಲಾ ಅಭಿವೃದ್ಧಿ ಮಂಡಳಿಯವರಿಂದ ತಾಲ್ಲೂಕ್ ಬೋರ್ಡಿಗೆ ಹೋಗುತ್ತದೆ. ಮಾನ್ಯ ಸದಸ್ಯರು ಅಲ್ಲಿ ಇರುವುದರಿಂದ ಅವರು ಚೆಕ್ ಮಾಡಿದರೆ ಬಹಳ ತೀವ್ರವಾಗಿ ಕೆಲಸವಾಗುತ್ತದೆಂದು ತಿಳಿದುಕೊಂಡಿದ್ದೇನೆ.

ಶ್ರೀ ಟಿ. ಮಾದಯ್ಯಗೌಡ.—ಬಾವಿಗಳನ್ನು ತೆಗೆಯಲು ಹಣವನ್ನು ಹಂಚಿದ್ದೇ ಇರುವುದಕ್ಕೆ ತಾಲ್ಲೂಕು ಬೋರ್ಡಿನವರು ಕಾರಣರು, ರೇಷ್ಮೆ ಇಲಾಖೆಯವರು ಯಾವ ರೀತಿಯಲ್ಲಿಯೂ ಕಾರಣರಲ್ಲವೆನ್ನುವುದು ಮಾನ್ಯ ಉಪಮಂತ್ರಿಗಳ ಅಭಿಪ್ರಾಯವೋ?

ಶ್ರೀ ಆರ್. ದಯಾನಂದಸಾಗರ್.—ವಿಕೇಂದ್ರೀಕರಣ ಮಾಡಬೇಕೆಂದು ತೀರ್ಮಾನ ಮಾಡಿ ಮಾಡಿದ್ದೇವೆ. ಅದು ಸರ್ಕಾರದ ನೀತಿ. ಅದರ ಪ್ರಕಾರ ತಾಲ್ಲೂಕು ಬೋರ್ಡ್‌ನವರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಆ ಅಧಿಕಾರವನ್ನು ಚಲಾಯಿಸಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಇನ್ನು ಮುಂದೆಯಾದರೂ ರೇಷ್ಮೆ ಇಲಾಖೆಯ ಕೆಲಸವನ್ನು ತಾಲ್ಲೂಕು ಬೋರ್ಡ್‌ಗಳ ಮೂಲಕ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೀರಾ?

ಶ್ರೀ ಆರ್. ದಯಾನಂದಸಾಗರ್.—ಬಾವಿಗೆ ಹಣ ವಿತರಣೆ ಮಾಡುವಾಗ ತಾಲ್ಲೂಕ್ ಬೋರ್ಡ್‌ನವರು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಇ. ನಾರಾಯಣಗೌಡ.—ಬಾವಿ ತೆಗೆದು ಪಂಪ್ ಸೆಟ್ ಹಾಕುವವರೆಗೂ ಗ್ರಾಂಟ್ ಕೊಡುವುದಕ್ಕೆ ಆಗುವುದಿಲ್ಲವೆಂದು ನಿರ್ಬಂಧವಿದೆ. ಇದರಿಂದ ರೈತರಿಗೆ ತೊಂದರೆಯಾಗುವುದರಿಂದ ಈ ನಿರ್ಬಂಧವನ್ನು ಸ್ವಲ್ಪ ಸಡಿಲಿಸುತ್ತೀರಾ?

ಶ್ರೀ ಆರ್. ದಯಾನಂದಸಾಗರ್.—ಪಂಪ್ ಸೆಟ್ ಹಾಕುವುದು ಬಹಳ ಮುಖ್ಯ, ನಾಲ್ಕೈದು ಸಾವಿರ ರೂಪಾಯಿ ಖರ್ಚುಮಾಡಿ ಬಾವಿ ತೆಗೆದರೆ ಪಂಪ್ ಸೆಟ್ ಇಲ್ಲದೆ ಇದ್ದರೆ ನಾಲ್ಕೈದು ಎಕರೆಗೆ ಕೂಡ ಪ್ರಯೋಜನವಾಗುವುದಿಲ್ಲ. ಅದಕ್ಕೋಸ್ಕರ ಬಾವಿ ತೆಗೆದಮೇಲೆ ಪಂಪ್ ಸೆಟ್ ಹಾಕಬೇಕೆಂದು ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರ ಜಿಲ್ಲಾ ಅಭಿವೃದ್ಧಿ ಮಂಡಳಿಗಳಿಗೆ ಹಣವನ್ನು ಕಳಿಸಿದ್ದು ಯಾವಾಗ, ಮತ್ತು ಅವರು ತಾಲ್ಲೂಕು ಬೋರ್ಡಿಗೆ ಹಣವನ್ನು ಕೊಟ್ಟದ್ದು ಯಾವಾಗ?

ಶ್ರೀ ಆರ್. ದಯಾನಂದಸಾಗರ್.—ಆ ವಿಷಯ ನನ್ನ ಹತ್ತಿರವಿಲ್ಲ, ತರಿಸಿ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ರೇಷ್ಮೆ ಕೈಗಾರಿಕೆ ಬಗ್ಗೆ ಒಂದು ಅಡ್ವೈಸರಿ ಕಮಿಟಿ ಏನಾದರೂ ಮಾಡಿದ್ದೀರಾ?

ಶ್ರೀ ಆರ್. ದಯಾನಂದಸಾಗರ್.—ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—1962-63ನೇ ಸಾಲಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಸ್ವಾಮಿ?

ಶ್ರೀ ಆರ್. ದಯಾನಂದಸಾಗರ್.—ಅದರ ಬಗ್ಗೆ ನನ್ನ ಹತ್ತಿರ ಲೆಕ್ಕ ಪತ್ರಗಳಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಏನಾದರೂ ಕೊಟ್ಟಿದ್ದಾರೆಯೇ ಇಲ್ಲವೇ ಸ್ವಾಮಿ?

ಶ್ರೀ ಆರ್. ದಯಾನಂದಸಾಗರ್.—ಕೊಟ್ಟಿದ್ದಾರೆ.

ಶ್ರೀ ಇ. ನಾರಾಯಣಗೌಡ.—ಇಲಾಖೆಯಿಂದ ದುಡ್ಡು ಕೊಡುವುದು ಬಹಳ ತಡವಾಗಿರುವುದರಿಂದ ದುಡ್ಡು ಖರ್ಚಾಗಲಿಲ್ಲವಲ್ಲವೇ ಸ್ವಾಮಿ?

ಶ್ರೀ ಆರ್. ದಯಾನಂದಸಾಗರ್.—ಅದು ಸರಿಯಲ್ಲ ಸ್ವಾಮಿ.

Establishment of a Central Cardamom Board.

*Q. 128. Smt. B. L. SUBBAMMA (Chickmagalur).—

Will the Government be pleased to state.—

(*a*) whether they have not received representation requesting to establish a Central Cardamom Board to safeguard the interests of Cardamom Planters;

(*b*) if so, the decision they have taken in this behalf?